		ಸ.ಪ್ರಾ.ಕೇ.	ಹಾನಗಲ್	1	
8.	ಶಿರಹಟ್ಟಿ	ಪ್ರಾ.ಆಕೇ	ಸೂರಣಗಿ	1	
		ಸ.ಆ.ಕೇ,	ಶಿರಹಟ್ಟಿ	1	3
9.	ಹಾವೇರಿ	''	ದೇವಿಹೊಸೂರು	1	
10.	ಹಿರೇಕೆರೂರು	''	ಚಿಕರೂರು	1	
		''	ಕುಡಪಲಿ	1	4
		ಸ.ಆ.ಕೇ.	ಹಿರೇಕೆರೂರು	2	
11.	ಬ್ಯಾಡಗಿ	''	ಬ್ಯಾಡಗಿ	2	2
12.	ರಾಣಿಬೆನ್ನೂರು	ಪ್ರಾ.ಆಕೇ	ಹಲಗೇರಿ	1	3
		''	ಕುಪ್ಪೇಲೂರು	2	
13.	ಗದಗ	ಪ್ರಾ.ಆಕೇ	ಮುಳಗುಂದ	1	1
				38	

ವಿಷಯ:- ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಕಡ್ಡಾಯ ಆಜ್ಞೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 451 (934)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಲ್ಲಿ 4ನೇ ತರಗತಿಯವರೆಗೆ ಕನ್ನಡ ಮಾಧ್ಯಮ ಇರಬೇಕೆಂಬ ಸರಕಾರಿ ಆಜ್ಞೆ ಜಾರಿಯಲ್ಲಿ ಇದೆಯೇ; ಇದ್ದಲ್ಲಿ ಅದನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೇ; ಇಲ್ಲವಾದಲ್ಲಿ ಕಾರಣಗಳೇನು;

ಆ) ಸದರಿ ಆಜ್ಞೆಯನ್ನು ಪಾಲಿಸದವರ ಮೇಲೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ರಾಜ್ಯದಲ್ಲಿನ ಎಲ್ಲ ಪ್ರಾಥಮಿಕ ಶಾಳೆಗಳಲ್ಲಿ 1ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷೆಯಲ್ಲಿ ಬೋಧಿಸಬೇಕೆಂಬುದು ಸರ್ಕಾರದ ಭಾಷಾ ನೀತಿಯಾಗಿರುತ್ತದೆ. ಅದರಂತೆ ಎಲ್ಲ ಶಾಲೆಗಳಲ್ಲಿ ಈ ನೀತಿಯನ್ನು ಪಾಲಿಸಲು ಕಟ್ಟುನಿಟ್ಟಾದ ಸೂಚನೆಗಳನ್ನು ಇಲಾಖಾಧಿಕಾರಿಗಳಿಗೆ ನೀಡಲಾಗಿದೆ.

ಅ) ಅಂತಹ ಪ್ರಕರಣಗಳು ವರದಿಯಾದಾಗ ನಿಯಮಾನುಸಾರ ಆಪರ ಮೇಲೆ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಸರ್ಕಾರಿ ಪ್ರೌಢಶಾಲೆಯ ಚಿತ್ರಾಪುರ (ದ.ಕ) ಕಟ್ಟಡದ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 452 (926)

ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರೌಢಶಾಲೆ, ಚಿತ್ರಾಪುರ (ದ.ಕ) ಇದರ ಕಟ್ಟಡವನ್ನು ಸರ್ಕಾರವು ಕಾದಿರಿಸಿದ ಜಾಗದಲ್ಲಿ ಕಟ್ಟಲಾಗಿದೆಯೇ ಅಥವಾ ಖಾಸಗಿ ಜಾಗದಲ್ಲಿ ಕಟ್ಟಲಾಗಿದೆಯೇ?

ಆ) ಈ ಕುರಿತಾಗಿ ಶಾಲಾಭಿವೃದ್ಧಿ ಸಮಿತಿಯು ತೆಗೆದುಕೊಂಡ ತೀರ್ಮಾನಗಳೇನು?

ಇ) ಶಾಲಾ ಕಟ್ಟಡವನ್ನು ಖಾಸಗಿ ಸ್ಥಳದಲ್ಲಿ ಕಟ್ಟಿದ್ದಲ್ಲಿ ಆ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಪಣಂಬೂರು ಮೊಗವೀರ ಸಂಘಕ್ಕೆ ಸೇರಿದ ಜಾಗದಲ್ಲಿ ಕಟ್ಟಲಾಗಿದೆ.

ಆ) ಈ ಬಗ್ಗೆ ಶಾಲಾ ಅಭಿವೃದ್ಧಿ ಸಮಿತಿಯು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ.

ಇ) ಸದರಿ ಕಟ್ಟಡ ಕಟ್ಟಿರುವ ಸ್ಥಳವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಲಾಗುವುದು.

ವಿಷಯ:- ಮೂಡುಶೆಡ್ಡೆ ಸರಕಾರಿ ಕ್ಷಯರೋಗ ಆಸ್ಪತ್ರೆಯಲ್ಲಿ ಕ್ಷಕಿರಣ ಯಂತ್ರ ವ್ಯವಸ್ಥೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 453 (928)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮೂಡುಶೆಡ್ಡೆ (ದ.ಕ)ದಲ್ಲಿರುವ ಸರಕಾರಿ ಕ್ಷಯರೋಗ ಆಸ್ಪತ್ರೆಯಲ್ಲಿ ಕ್ಷ-ಕಿರಣಯಂತ್ರದ ವ್ಯವಸ್ಥೆ ಎಷ್ಟು ವರ್ಷಗಳಿಂದ ಇಲ್ಲವಾಗಿದೆ, ಅದಕ್ಕೆ ಕಾರಣಗಳೇನು?

ಆ) ಈ ಕೊರತೆಯನ್ನು ನೀಗಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಮೂಡಶೆಡ್ಡೆ (ದ.ಕ) ಸರ್ಕಾರಿ ಕ್ಷಯರೋಗ ಆಸ್ಪತ್ರೆಯಲ್ಲಿ ಸುಮಾರು 5